ದಿನಾಂಕಃ **27-03-2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ** ಪ್ರತಿವಾದಿ 8 ರವರ ಪರ ಶ್ರೀ ಕೆ.ಬಿ.ಜಿ ವಕೀಲರಿಂದ,

1) ನನ್ನ ಗಂಡನ ಹೆಸರು ಮಂಜುನಾಥ. ನನ್ನ ಗಂಡನ ಊರು ಗೊರಗುಂಟೆ ಗ್ರಾಮ. ನನ್ನ ಮದುವೆ ದಿಃ03/05/1989 ರಂದು ಆಗಿರುತ್ತದೆ. ಮದುವೆ ಸಮಯದಲ್ಲಿ ನನಗೆ ಯಾವುದೇ ಉಡುಗೊರೆಗಳನ್ನು ನೀಡಿರುವುದಿಲ್ಲ. ನಾನು ದಾವಾ ಸ್ವತ್ತುಗಳಲ್ಲಿ ಭಾಗಾಂಶ ಕೋರಿ ದಾವೆ ಸಲ್ಲಿಸಿರುತ್ತೇನೆ. ದಾವಾ ಸ್ವತ್ತಗಳ ಸರ್ವೆ ನಂ ಮತ್ತು ಚೆಕ್ಕು ಬಂಧಿ ಬಗ್ಗೆ ನನಗೆ ಗೊತ್ತಿರುವುದಿಲ್ಲ. 8 ನೇ ಪ್ರತಿವಾದಿಯ ತಂದೆ ದಾವಾ ಐಟಂ ನಂ.1 ಆಸ್ತಿಯನ್ನು ಖರೀದಿ ಮಾಡಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನಾನು ದಾವಾ ಐಟಂ ನಂ. ಆಸ್ತಿಗೆ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲನೆ ಮಾಡಿರುತ್ತೇನೆ. 1988-1989 ಸಾಲನಲ್ಲಿ ಸದರಿ ಸ್ವತ್ತು ಯಾರ ಹೆಸರಿನಲ್ಲಿ ಇತ್ತು ಎಂದು ನಾನು ತಿಳಿದುಕೊಂಡಿರುವುದಿಲ್ಲ. ನನ್ನ ತಂದೆ ಮರಣ ಹೊಂದಿದ ದಿನಾಂಕ ನೆನಪಿರುವುದಿಲ್ಲ.

2) ನನ್ನ ತಂದೆ ಜೀವಂತ ಅವಧಿಯಲ್ಲಿ ದಾವಾ ಐಟಂ ನಂ. 1 ಆಸ್ತಿಯನ್ನು ಪ್ತಿವಾದಿ 8 ರವರ ತಂದೆಗೆ ಮಾರಾಟ ಮಾಡಿರುವ ಆಸ್ತಿಯನ್ನು ಹೊರತುಪಡಿಸಿ ನನ್ನ ತಾಯಿ ಹೆಸರಿನಲ್ಲಿ ಇರುವ ಆಸ್ತಿಗಳಲ್ಲಿ ಭಾಗಾಂಶ ಕೋರಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಂದೆ ಪ್ರತಿವಾದಿ 2 ರವರ ಹೆಸರಿಗೆ ಅಕ್ಕಿ ಗಿರಣಿ ನಡೆಸಲು ಹೇಳಿಕೆ ಆದಾರದ ಮೇಲೆ ಖಾತೆ ಬದಲಾವಣೆ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ 2 ನೇ ಪ್ರತಿವಾದಿ ದಾವಾ ಐಟಂ ನಂ.1 ರಲ್ಲಿ ಮನೆಯನ್ನು ನಿರ್ಮಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 2005 ನೇ ಸಾಲಿನಲ್ಲಿ 2 ನೇ ಪ್ರತಿವಾದಿ ವಿಭಾಗದ ಮೂಲಕ ಬೇರೆ ಆಗಿರುತ್ತಾರೆ ಎಂದರೆ ಸರಿಯಲ್ಲ.

3) ದಿಃ 21/02/1998 ರಂದು ಪ್ರತಿವಾದಿ 2 ರವರು ಪ್ರತಿವಾದಿ 8 ರವರ ತಂದೆಗೆ ದಾವಾ ಐಟಂ ನಂ. 1 ಆಸ್ತಿಯನ್ನು ಕ್ರಯ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಸ್ವತ್ತು ನನ್ನ ತಂದೆಯ ಸ್ವರ್ಯಾಜಿತ ಸ್ವತ್ತು ಎಂದರೆ ನನಗೆ ಗೊತ್ತಿಲ್ಲ. ದಾವಾ ಐಟಂ ನಂ. 1 ಸ್ವತ್ತನ್ನು ಹೊರತುಪಡಿಸಿ ಇತರೆ ಸ್ವತ್ತುಗಳನ್ನು ದಿಃ 20/01/2005 ರಂದು ನೊಂದಾಯಿತ ವಿಭಾಗದ ಪತ್ರದ ಮೂಲಕ ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಭಾಗ ಪತ್ರ ಆಗುವ ಹಿಂದೆ 2 ನೇ ಪ್ರತಿವಾದಿ ಮರಣ ಹೊಂದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಅತ್ತಿಗೆಯ ಹೆಸರು ಸಾವಿತ್ರಿ ಎಂದರೆ ಸರಿ. ದಾವಾ ಐಟಂ ನಂ. 1 ಮಾರಟ ಆಗಿರುವ ಕಾರಣ ದಿಃ 20/01/2005 ರಂದು ಆಗಿರುವ ವಿಭಾಗ ಪತ್ರದಲ್ಲಿ ಸೇರಿಸಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ.

4) 8 ನೇ ಪ್ರತಿವಾದಿಯ ತಂದೆ ದಾವಾ ಐಟಂ ನಂ. 1 ಆಸ್ತಿಯನ್ನು ಖರೀದಿ ಮಾಡಿದ ನಂತರ ಸದರಿ ಆಸ್ತಿಯ ಖಾತೆ 8 ನೇ ಪ್ರತಿವಾದಿಯ ತಂದೆಯ ಹೆಸರಿನಲ್ಲಿ ನಮೂದಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. 8 ನೇ ಪ್ರತಿವಾದಿಯ ತಂದೆ ಖರೀದಿ ಮಾಡಿದ ನಂತರ ಸದರಿ ಆಸ್ತಿಯನ್ನು ಭೂಪರಿವರ್ತನೆ ಮಾಡಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಿಃ 24/04/2004 ರಂದು ಉಪ ವಿಭಾಗಾಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಿಃ 15/12/2004 ರಂದು ಕಂದಾಯ ಅಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿ 8 ನೇ ಪ್ರತಿವಾದಿಯ ತಂದೆಯ ಸ್ವಾಧೀನವನ್ನು ಖಚಿತ ಪಡಿಸಿ ಉಪವಿಭಾಗಾಧಿಕಾರಿಗಳಿಗೆ ವರದಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ನಾವೇ ಸ್ವಾಧೀನ ನೀಡಿರುತ್ತೇವೆ ಎಂದು ನುಡಿಯುತ್ತಾರೆ. ನಾನು ಇತರೆ ವಾದಿಗಳು ಮತ್ತು 1 ನೇ ಪ್ರತಿವಾದಿ ಸೇರಿ ಈ ದಾವೆಯನ್ನು ಹಾಕಿರುತ್ತೇವೆ ಎಂದರೆ ಸರಿಯಲ್ಲ. ನಾನು ಇತರೆ ವಾದಿಗಳು ಮತ್ತು 1 ನೇ ಪ್ರತಿವಾದಿ ಸೇರಿ ಮಾರಾಟ ಮಾಡಿರುವ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ಈ ದಾವೆಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ.

ಮದುವೆ ಆಗುವ ಕಾಲಕ್ಕೆ ನನಗೆ ಕುಟುಂಬದ ಜಮೀನಿನ ಬಗ್ಗೆ ಮಾಹಿತಿ ಇತ್ತು ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ದಾವಾ ಐಟಂ ನಂ. 1 ಸ್ವತ್ತು ಮಾರಾಟ ಮಾಡುವ ಕಾಲಕ್ಕೆ ಅಲ್ಪ ವಯಸ್ಕಳು ಇದ್ದೆ ಎಂದರೆ ಸರಿಯಲ್ಲ. ನನಗೆ ಈಗ 55 ವರ್ಷ ವಯಸ್ಸಾಗಿರುತ್ತದೆ. ನನಗೆ 50 ವರ್ಷ ವಯಸ್ಸಾಗಿದೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿರುವುದಿಲ್ಲ.

5) ದಾವಾ ಐಟಂ ನಂ. 1 ಆಸ್ತಿಯ ಬಗ್ಗೆ 8 ನೇ ಪ್ರತಿವಾದಿ ಮತ್ತು ಅವರ ಸಹೋದರರು ವಿಭಾಗ ಕೋರಿ ದಾವೆ ಸಲ್ಲಿಸಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸದರಿ ವಾವೆಯ ಆದೇಶದ ಪ್ರಕಾರ ದಾವಾ ಐಟಂ ನಂ. 1 ಆಸ್ತಿ 8 ನೇ ಪ್ರತಿವಾದಿಯ ಭಾಗಕ್ಕೆ ಬಂದಿರುತ್ತದೆ ಎಂದರೆ ಸರಿಯಲ್ಲ. ದಾವಾ ಐಟಂ ನಂ. 1 ಸ್ವತ್ತು ಚೀರನಹಳ್ಳಿ ಮುಖ್ಯ ರಸ್ತೆಗೆ ಬರುತ್ತದೆ ಎಂದರೆ ಸರಿ. ಸದರಿ ದಾವಾ ಐಟಂ ನಂ. 1 ಸ್ವತ್ತಿನಲ್ಲಿ 30 ನಿವೇಶನಗಳು ಇರುತ್ತವೆ ಎಂದರೆ ಸರಿಯಲ್ಲ. 8 ನೇ ಪ್ರತಿವಾದಿಯ ಹೆಸರಿಗೆ ಕಂದಾಯ ದಾಖಲೆಗಳು ಬಂದಿರುತ್ತವೆ ಎಂದರೆ ನನಗೆ ಗೊತ್ತಿಲ್ಲ.

6) ದಾವಾ ಐಟಂ ನಂ. 1 ಆಸ್ತಿಯ ದಕ್ಷಿಣ ಭಾಗಕ್ಕೆ ಇರುವ ಆಸ್ತಿಯನ್ನು 2 ನೇ ಪ್ರತಿವಾದಿಯು ಸಿರಾಜ್ ಎಂಬುವವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತುಗಳು ನನ್ನ ತಾಯಿಗೆ ಅವರ ತಾಯಿಯ ಮನೆಯಿಂದ ಬಂದಿರುತ್ತವೆ ಎಂದರೆ ಸರಿಯಲ್ಲ. ದಾವಾ ಸ್ವತ್ತು 2 ನೇ ಪ್ರತಿವಾದಿಯ ಸ್ವಯಾರ್ಜಿತ ಸ್ವತ್ತು ಆಗಿದ್ದು, ಮತ್ತು 8 ನೇ ಪ್ರತಿವಾದಿಯ ತಂದೆ ಕಾನೂನು ಬದ್ಧವಾಗಿ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಮಾರಾಟ ಮಾಡಿರುವ ವಿಷಯ ಗೊತ್ತಿದ್ದರೂ ಸಹ ಅಕ್ರಮ ಲಾಭ ಪಡೆಯಲು ಸುಳ್ಳು ಸಾಕ್ಷನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಪ್ರತಿವಾದಿ 23 ಮತ್ತು 24 ರವರ ಶ್ರೀ ಎಲ್ ವಿ ಆರ್ ವಕೀಲರಿಂದ,**

1) ನಾನು ವಾದಿ 1 ಮತ್ತು 3 ರವರ ಪರ ಸಾಕ್ಷಿ ವಿಚಾರಣೆ ನುಡಿಯುತ್ತಿರುವ ಬಗ್ಗೆ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ತಿಳಿಸಿರುತ್ತೇನೆ. ನಾನು ಪ್ರತಿವಾದಿ 1 ಮತ್ತು ಹೊಣ್ಣೇಗೌಡರ ಮಗಳೆಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ನಾನು ಈ ದಾವೆಯಲ್ಲಿ ಎಷ್ಟು ಜನ ಪ್ರತಿವಾದಿಗಳನ್ನಾಗಿ ಮಾಡಿದ್ದೇನೆ ಎಂದರೆ ನನಗೆ ಗೊತ್ತಿಲ್ಲ. ನಾನು ವಂಶವೃಕ್ಷವನ್ನು ಹಾಜರುಪಡಿಸಿರುವುದಿಲ್ಲ. ನಾನು ಮೂರನೇ ತರಗತಿಯವರಗೆ ವ್ಯಾಸಂಗ ಮಾಡಿರುತ್ತೇನೆ. ಚೀರನಹಳ್ಳಿ ಪ್ರಾಥಮಿಕ ಶಾಲೆಯ ಓದಿರುತ್ತೇನೆ.

2) ದಾವಾ ಐಟಂ ನಂ. 7 ಆಸ್ತಿಯು ನ್ನನ ತಂದೆಯ ತಾಯಿಯ ಮನೆಯ ಆಸ್ತಿ ಆಗಿರುತ್ತದೆ. ನನ್ನ ಅಜ್ಜಿಯ ತಂದೆಯ ಹುಳಕಯ್ಯ ರವರಿಗೆ ಸೇರಿದ ಆಸ್ತಿ ಎಂದರೆ ಸರಿ. ನನ್ನ ಅಜ್ಜಿಯ ತಂದೆಗೆ ಒಬ್ಬಳೇ ಮಗಳು ಎಂದುತೋರಿಸಲು ದಾಖಲೆ ಹಾಜರುಪಡಿಸಿರುವುದಿಲ್ಲ. ದಾವಾ ಐಟಂ ನಂ. 7 ರ ಆಸ್ತಿ ನಮ್ಮ ಕುಟುಂಬ ಪಿತ್ರಾರ್ಜಿತ ಆಸ್ತಿ ಎಂದು ಈ ದಾವೆಯನ್ನು ಸಲ್ಲಿರುತ್ತೇನೆ. ಸದರಿ ಆಸ್ತಿಯು ನಮ್ಮ ಕುಟುಂಬಕ್ಕೆ ಯಾವ ರೀತಿ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಿಃ 20/01/2005 ರಂದು ಹೊನ್ನಪ್ಪ ಮತ್ತು ಅವರ ಮಕ್ಕಳು ನೊಂದಾಯಿತ ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. 2005 ನೇ ಸಾಲಿನಲ್ಲಿ ನನ್ನ ತಂದೆ ಜೀವಂತ ಇದ್ದರು ಎಂದರೆ ಸರಿಯಲ್ಲ. ಹೊಣ್ಣೇಗೌಡ ರವರು ಜೀವಂತ ಇದ್ದಾರ ವಿಭಾಗ ಪತ್ರ ಆಗಿರುವ ವಿಷಯ ನನಗೆ ಗೊತ್ತಿರುತ್ತದೆ ಎಂದರೆ ಸರಿಯಲ್ಲ.

3) ಪ್ರತಿವಾದಿ 4 ರವರು ಪ್ರತಿವಾದಿ 13 ರವರಿಗೆ ದಾವಾ ಐಟಂ ನಂ. 7 ಆಸ್ತಿಯನ್ನು ಮಾರಾಟ ಮಾಡಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿ 13 ರವರು ಪ್ರತಿವಾದಿ 15 ರವರಿಗೆ ಸದರಿ ಆಸ್ತಿಯನು ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ 15 ಮತ್ತು 16 ನಮ್ಮ ಸಂಬಂಧಕರಾಗಿರುವುದಿಲ್ಲ. ಪ್ರತಿವಾದಿ 15 ರವರು ಪ್ರತಿವಾದಿ 16 ದಾವಾ ಐಟಂ ನಂ. 7 ಆಸ್ತಿಯನ್ನು ದಾನ ಪತ್ರದ ಮೂಲಕ

ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ 16 ರವರು ಸದರಿ ಆಸ್ತಿಯನ್ನು ಪ್ರತಿವಾದಿ 23 ಮತ್ತು 24 ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ವಿಭಾಗ ಪತ್ರ ಮತ್ತು ಕ್ರಯ ಪತ್ರಗಳನ್ನು ಪ್ರಶ್ನೆ ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಐಟಂ ನಂ. 7 ಆಸ್ತಿಗೆ ಸಂಬಂಧಪಟ್ಟಂತೆ ಕಂದಾಯ ದಾಖಲೆಗಳನು ಹಾಜರುಪಡಿಸಲು ತೊಂದರೆ ಇರುವುದಿಲ್ಲ. ದಾವೆಯಲ್ಲಿ ಹಾಜರುಪಡಿಸಿರುವ ನನ್ನ ಗಂಡ ಪಡೆದು ಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ದಾಖಲೆಗಳ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಸಲ್ಲಿಸುವ ಕಾಲಕ್ಕೆ ನಾನೇ ಮಾಹಿತಿ ನೀಡಿರುತ್ತೇನೆ. ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿರುವ ವಿಷಯಗಳು ನನಗೆ ಗೊತ್ತಿರುವುದಿಲ್ಲ. ದಾವಾ ಐಟಂ ನಂ. 7 ರಲ್ಲಿ ನನಗೆ ಯಾವುದೇ ಭಾಗಾಂಶ ಹಕ್ಕು ಇಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ